ಸಮಯದಲ್ಲಿ ವಿಶ್ವ ಭಾಷೆಯಂತೆ ಇರುವ ಚೇಗುವಾರನು ಎಲ್ಲರಿಗೂ ಅರ್ಥವಾಗಲಿ, ಉಳ್ಳವರ ಎದೆಗಳಲ್ಲಿ ಇವನ ಹೆಸರು ಕೇಳಿದರೆ ನಡುಕ ಹುಟ್ಟುವಂತಾಗಲಿ, ಹೀಗೆ ಜಗದಲ್ಲಿನ ತಲ್ಲಣಗಳಿಗೆ, ಶಾಂತಿ ದೊರಕಲಿ... ಎಂದು ದಿನವೂ ಪ್ರಾರ್ಥಿಸುತ್ತಿದ್ದವಳು ಪ್ರಾರ್ಥನಾ.

ಈ ನೀರವ ರಾತ್ರಿಯಲ್ಲಿ ಆರಾಮಾಗಿ ಮಲಗಬೇಕು. ಈ ರಾತ್ರಿ ನನ್ನದು ಎಂದು ಬಯಸುವುದು ತಪ್ಪೇನು? ಪಾಪ ಹೆಣ್ಣಲ್ಲವೇ, ಹೆಣ್ಣುಜೀವ ಹೀಗೆ ಒಂದು ರಾತ್ರಿ ಚಿಂತೆ, ಜಗದ ಜಂಜಡ ಮರೆತು ನಿದ್ದೆ ಮಾಡಬೇಕೆಂಬ ಚಿಕ್ಕ ಆಸೆಯೂ ಇಟ್ಟುಕೊಂಡ್ರೆ ಮುಗೀತು ಕಥೆ. 'ಮುಂದೇನು ಅಂತ ಯೋಚಿಸು' ಎಂದು ವಾಸ್ತವ ಸ್ಥಿತಿಯನ್ನು ಮನಸ್ಸು ಎಚ್ಚರಿಸಲಿಲ್ಲ. ಜಗಕೆ ಕತ್ತಲು ಎಂದರೆ ಹೊಸದನ್ನು ಹುಟ್ಟು ಹಾಕುವ ಪ್ರಕ್ರಿಯೆ ನಡೆಯುವ ಸಮಯ. ಆದರೆ ಇವಳಿಗೆ ಚಿಂತೆಗಳೆಲ್ಲಾ ಮುಂದೆ ಬಂದು ಕೂತವು. ಈ ಕತ್ತಲಲ್ಲೂ ಅವಳ ಏರಿಯಾದ ಬೆಳಕಿನ ಕಿಡಿಗಳು ಒಂದೊಂದೇ ಹತ್ತಿರ ಬಂದು 'ಹೀಗಲ್ಲ ಹೀಗೆ' ಎಂದು ತಿಳಿಸಿ ಹೇಳತೊಡಗಿದವು. ಮೊದಲಿಗೆ ಬಂದ ಕುಲಕರ್ಣಿ ಆಂಟಿ, 'ಬೆಳಗ್ಗೆ ಎದ್ದು ಶುದ್ಧವಾಗಿ ತಣ್ಣೀರಿನಿಂದ ಸ್ನಾನ ಮಾಡಿ ಮಡಿಯಿಂದ ಸೂರ್ಯ ನಮಸ್ಕಾರ ಮಾಡಿ, ತುಳಸಿಗಿಡಕ್ಕೆ ಪೂಜೆ ಮಾಡಿ ಹತ್ತಿರವಿರುವ ಶಿವನ ದೇವಸ್ಥಾನಕ್ಕೆ ಹೋಗಿ ಬಾ ಒಳ್ಳೆಯ ವರ ಸಿಗುತ್ತಾನೆ ಪ್ರಾರ್ಥನಾ! ನಿನಗಾಗ್ಲೆ ವಯಸ್ಸು ಇಪ್ಪತ್ತಾರು ನೆನಪಿಟ್ಕೋ ಮರಿಬೇಡ'...

ಈ ಬಡಿಗೇರ್ ಆಂಟಿದು ಬಾಕಿ ಮಾತು ಒಂದಿತ್ತು. 'ಏ ಪ್ರಾರ್ಥನಾ ನಸುಕಿನ ಜಾವ ಐದುಗಂಟೆಗೆ ಸ್ನಾನ ಮಾಡಿ ಬನ್ನಿಮರದ ಹತ್ತಿರ ಹೋಗಿ ಬಾ, ಅಲ್ಲಿ ಕಾಳಿಕಾದೇವಿಯ ದೇವಸ್ಥಾನ ಇದೆ. ಪೂಜೆ ಮಾಡಿಸು

